ಶ್ರೀ ಡಿ. ನಾಗರಾಜಯ್ಯ:– ಸೋಮವಾರ ಮಾಹಿತಿ ಕೊಡುತ್ತೇನೆ.

ಅಧ್ಯಕ್ಷರು:– ಆಯಿತು ಕೊಡಿ. ಸುನಿಲ್ ಕುಮಾರ್.

ಅಪರಾಧ ಪ್ರಕರಣದಲ್ಲಿ ಭಾಗಿಯಾಗಿರುವವರು

104 (2358); ಶ್ರೀ ಸುನಿಲ್‌ಕುಮಾರ್ ವಿ. (ಕಾರ್ಕಳ)

ಅ) ರಾಜ್ಯದಲ್ಲಿ ಅಪರಾಧ ಪ್ರಕರಣಗಳಲ್ಲಿ ಭಾಗಿಯಾದ ಕೆ.ಎಫ್.ಡಿ. ಮತ್ತು ಪಿ.ಎಫ್.ಐ. ಸಂಘಟನೆಯ ಕಾರ್ಯಕರ್ತರ ಮೇಲಿನ ಕ್ರಿಮಿನಲ್ ಮೊಕದ್ದಮೆಗಳನ್ನು ಸರ್ಕಾರ ವಾಪಸ್ಸು ಪಡೆಯಲು ಕಾರಣವೇನು;

ಆ) ಹಾಗಿದ್ದಲ್ಲಿ, ಸದರಿ ಮೊಕದ್ದಮೆಗಳನ್ನು ವಾಪಸ್ಸು ಪಡೆಯುವಲ್ಲಿ ಸ್ಥಳೀಯ ಠಾಣೆ ಹಾಗೂ ಡಿ.ಜಿ. ಮತ್ತು ಐ.ಜಿ.ಪಿ. ಯವರು ಒಪ್ಪಿಗೆ ಸೂಚಿಸಿರುತ್ತಾರೆಯೇ; (ನಡಾವಳಿ ಪ್ರತಿ ಒದಗಿಸುವುದು)

ಇ) ಸದರಿ ಮೊಕದ್ದಮೆಗಳಿಗೆ ಸಂಬಂಧಿಸಿದಂತೆ ಪ್ರಾಸಿಕ್ಯೂಷನ್ ಒಪ್ಪಿಗೆ ಪಡೆಯಲಾಗಿದೆಯೇ? (ನಡಾವಳಿ ಪ್ರತಿ ಒದಗಿಸುವುದು)

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು)

ಅ) ಅಭಿಯೋಜನೆಯಿಂದ ಮೊಕದ್ದಮೆಗಳನ್ನು ಹಿಂಪಡೆಯುವ ಬಗ್ಗೆ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಲ್ಲಿ, ಸದರಿ ಮೊಕದ್ದಮೆಗಳನ್ನು ಹಿಂಪಡೆಯುವ ಕುರಿತು ನಿಯಮಾನುಸಾರ ಪರಿಶೀಲಿಸಲಾಗುತ್ತದೆ. ಈ ಪ್ರಕ್ರಿಯೆ ಈ ಹಿಂದಿನಿಂದಲೂ ನಡೆದು ಬಂದಿದೆ.

2009 ರಲ್ಲಿ ಮೈಸೂರಿನಲ್ಲಿ ನಡೆದ ಕೋಮುಗಲಭೆ ಹಾಗೂ 2010 ರಲ್ಲಿ ಶಿವಮೊಗ್ಗ ಹಾಗೂ ಹಾಸನದಲ್ಲಿ ನಡೆದ ಗಲಭೆಯಲ್ಲಿ ಪಾಲ್ಗೊಂಡಿದ್ದವರ ಮೇಲಿನ (ಹಿಂದೂಗಳು ಹಾಗೂ ಮುಸಲ್ಮಾನರು) ಮೊಕದ್ದಮೆಗಳನ್ನು ಹಿಂಪಡೆಯಲು ಸಚಿವ ಸಂಪುಟವು ತೀರ್ಮಾನಿಸಿದೆ.

ಈ ಪೈಕಿ ಒಟ್ಟು 112 ಮಂದಿ ಮುಸಲ್ಮಾನರು KFD/PFI ಸಂಘಟನೆಗಳ ಜೊತೆ ಗುರ್ತಿಸಿಕೊಂಡವರಿರುತ್ತಾರೆ. ಸರ್ಕಾರವು KFD/PFI ಸಂಘಟನೆಗಳ ವಿರುದ್ಧ ದಾಖಲಿಸಿರುವ ಯಾವುದೇ ಪ್ರಕರಣಗಳನ್ನು ಹಿಂಪಡೆದಿರುವುದಿಲ್ಲ ಹಾಗೂ PFI/KFD ನಿಷೇಧಿತ ಸಂಘಟನೆಗಳಾಗಿರುವುದಿಲ್ಲ. ಸರ್ಕಾರವು ಸಮಗ್ರ ದೃಷ್ಟಿಕೋನದಿಂದ ಪರಿಶೀಲಿಸಿ ಪ್ರಕರಣಗಳನ್ನು ಹಿಂಪಡೆಯಲು ತೀರ್ಮಾನಿಸಿರುತ್ತದೆ.

ಸರ್ಕಾರವು ತನಗೆ ಪ್ರದತ್ತವಾದ ಅಧಿಕಾರದ ಅಡಿಯಲ್ಲಿ ರೈತರ ವಿರುದ್ಧ, ಕೋಮು ಗಲಭೆ, ಇತರ ವೈಯಕ್ತಿಕ ಹಿತಾಸಕ್ತಿಯಿಲ್ಲದೆ ವಿಷಯ ಆಧಾರಿತ ಕಾರಣಗಳಿಗೆ ಹಮ್ಮಿಕೊಂಡಿರುವ ಪ್ರತಿಭಟನೆಗಳಲ್ಲಿ ಭಾಗಿಯಾದ ವ್ಯಕ್ತಿಗಳ ಮೇಲೆ, ಈ ಪ್ರತಿಭಟನೆ/ಗಲಭೆಗಳಿಂದ ಸಾರ್ವಜನಿಕ ತೊಂದರೆ ಉಂಟಾಗುವ/ಉಂಟಾಗಿರುವ ಕಾರಣಗಳಿಂದ ದಾಖಲಾದ ಮೊಕದ್ದಮೆಗಳನ್ನು ನಿಯಮಾನುಸಾರ ಪರಿಶೀಲಿಸಿ ಅಭಿಯೋಜನೆಯಿಂದ ಮೊಕದ್ದಮೆಗಳನ್ನು ಹಿಂಪಡೆಯಲು ಸರ್ಕಾರಿ ಅಭಿಯೋಜಕರಿಗೆ ಸಿ.ಆರ್.ಪಿ.ಸಿ. ಕಲಂ 321 ರಂತೆ ಕ್ರಮ ಕೈಗೊಳ್ಳಲು ನಿರ್ದೇಶನ ನೀಡಲಾಗುತ್ತದೆ.

ಸಿ.ಆರ್.ಪಿ.ಸಿ. ಕಲಂ 321 ರ ಉದ್ಧೃತ ಭಾಗವು ಈ ಕೆಳಕಂಡಂತಿದೆ.

> **ಕಲಂ 321 ಸಿ.ಆರ್.ಪಿ.ಸಿ.: ಪ್ರಾಸಿಕ್ಯೂಷನ್ನು ಹಿಂತೆಗೆದುಕೊಳ್ಳುವುದು:** ಮೊಕದ್ದಮೆಯನ್ನು ನಡೆಸುತ್ತಿರುವ ಸರ್ಕಾರಿ ಪ್ರಾಸಿಕ್ಯೂಟರ್ ಅಥವಾ ಸಹಾಯಕ ಸರ್ಕಾರಿ ಪ್ರಾಸಿಕ್ಯೂಟರ್, ನ್ಯಾಯಾಲಯವು ತೀರ್ಪು ಕೊಡುವ ಮುನ್ನ ಯಾವುದೇ ಸಮಯದಲ್ಲಿ, ಸಾಮಾನ್ಯವಾಗಿ ಅಥವಾ ಅವನನ್ನು ವಿಚಾರಣೆ ಮಾಡಿದ ಒಂದು ಅಥವಾ ಹೆಚ್ಚು ಅಪರಾಧಗಳ ಬಗ್ಗೆ ಯಾವುದೇ ವ್ಯಕ್ತಿಯ ವಿರುದ್ಧವಾದ ಪ್ರಾಸಿಕ್ಯೂಷನ್ ಅನ್ನು, ನ್ಯಾಯಾಲಯದ ಅನುಮತಿ ಪಡೆದು ಹಿಂತೆಗೆದುಕೊಳ್ಳಬಹುದು.

ಸಿ.ಆರ್.ಪಿ.ಸಿ. ಯಡಿಯಲ್ಲಿ ಈ ಅವಕಾಶ ಕಲ್ಪಿಸಲಾಗಿರುತ್ತದೆ. ಸರ್ಕಾರವು ರಾಜ್ಯದಲ್ಲಿ ನಡೆದ ಕೋಮುಗಲಭೆಗೆ ಸಂಬಂಧಿಸಿದ ಪ್ರಕರಣಗಳನ್ನು ಹಿಂಪಡೆಯುವ ಸಂಬಂಧ ಸರ್ಕಾರಕ್ಕೆ ಮನವಿ ಬಂದ ಹಿನ್ನಲೆಯಲ್ಲಿ ಡಿಜಿ & ಐಜಿಪಿ, ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ ಮತ್ತು ಕಾನೂನು ಇಲಾಖೆಯ ಅಭಿಪ್ರಾಯವನ್ನು ಪಡೆದು, ಪ್ರಸ್ತಾವನೆಗಳನ್ನು ಪರಿಶೀಲಿಸಿ Transaction of Business Rules, 1977 ರ ಕ್ರಮ ಸಂಖ್ಯೆ 30 ರಂತೆ ಸಚಿವ ಸಂಪುಟದಲ್ಲಿ ಮಂಡಿಸಿ, ಸಾಧಕ–ಬಾಧಕಗಳನ್ನು ಚರ್ಚಿಸಿ ತೀರ್ಮಾನ ತೆಗೆದುಕೊಂಡಿರುತ್ತದೆ.

ಆ) ಡಿ.ಜಿ. ಮತ್ತು ಐ.ಜಿ.ಪಿ. ರವರಿಂದ ವರದಿಯನ್ನು ಪಡೆಯಲಾಗಿದ್ದು, ಅಂತಿಮವಾಗಿ ಸರ್ಕಾರವು ಪರಿಶೀಲಿಸಿ ನಿಯಮಾನುಸಾರ ನಿರ್ಧಾರ ತೆಗೆದುಕೊಂಡಿರುತ್ತದೆ.

ಇ) ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ ರವರಿಂದ ವರದಿಯನ್ನು ಪಡೆಯಲಾಗಿದ್ದು, ಅಂತಿಮವಾಗಿ ಸರ್ಕಾರವು ಪರಿಶೀಲಿಸಿ ನಿಯಮಾನುಸಾರ ನಿರ್ಧಾರ ತೆಗೆದುಕೊಂಡಿರುತ್ತದೆ.

ಶ್ರೀ ಸುನಿಲ್‌ಕುಮಾರ್ ವಿ.:– ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ಸಚಿವ ಸಂಪುಟದ ಸಭೆಯಲ್ಲಿ KFD ಮತ್ತು PFI ಸಂಘಟನೆಯ ಕಾರ್ಯಕರ್ತರ ಮೇಲೆ ಮೊಕದ್ದಮೆ ಹಾಕಿರುವುನ್ನು ವಾಪಸ್ ತೆಗೆದುಕೊಂಡಿದ್ದಾರೆ ಎನ್ನುವುದು ನನ್ನ ಮೂಲ ಪ್ರಶ್ನೆ ಇರುವಂಥದ್ದು. ಸರ್ಕಾರದ ಉತ್ತರದಲ್ಲಿ ಸಮಗ್ರ ದೃಷ್ಟಿಕೋನದಿಂದ ಪರಿಶೀಲಿಸಿ ಪ್ರಕರಣವನ್ನು ಹಿಂಪಡೆಯಲು ತೀರ್ಮಾನಿಸಿದೆ ಎಂದು ಕೊಟ್ಟಿದ್ದಾರೆ. ದಯಮಾಡಿ ಮಾನ್ಯ ಗೃಹ ಸಚಿವರು ಸಮಗ್ರ ದೃಷ್ಟಿಕೋನದಿಂದ ಎಂದರೆ ಏನೆಂದು ಸ್ವಲ್ಪ ವಿವರಿಸಬೇಕು. ಎರಡನೆಯದು KFD, PFI ಸಂಘಟನೆಗಳು ಪಾಕಿಸ್ತಾನ ಪರವಾದ ಘೋಷಣೆಗಳನ್ನು ಶಿವಮೊಗ್ಗ ಮತ್ತು ಮೈಸೂರಿನಲ್ಲಿ ಘೋಷಣೆಗಳನ್ನು

ಕೂಗಿದ್ದರು, ಆ ನಂತರ ಗಲಾಟೆಗಳು ಪ್ರಾರಂಭವಾಗಿದ್ದವು ಎನ್ನುವುದು ಗೊತ್ತಾಗಿದೆ. FIR ನಲ್ಲಿ ಕೂಡ ಅದು ದಾಖಲಾಗಿದೆ. ಭಾರತ ವಿರೋಧಿ ಚಟುವಟಿಕೆಗಳನ್ನು ಮಾಡುತ್ತಿರುವಂತಹ ಕಾರ್ಯಕರ್ತರ ಮೇಲೆ ಹಾಕಿರುವಂತಹ ಮೊಕದ್ದಮೆಯನ್ನು ಹಿಂಪಡೆಯುವ ಉದ್ದೇಶ ಸರ್ಕಾರಕ್ಕೆ ಏನಿತ್ತು? ಈ ಹಿನ್ನೆಲೆಯಲ್ಲಿ DGP ಮತ್ತು IGP ಯವರು ಯಾವ ಅಭಿಪ್ರಾಯಗಳನ್ನು ಕೊಟ್ಟಿದ್ದರು? ಎಂಬ ಬಗ್ಗೆ ನಡಾವಳಿಗಳನ್ನು ಕೊಡಿ ಎಂದು ಕೇಳಿದ್ದೆ. ಅದನ್ನು ನೀವು ಕೊಟ್ಟಿಲ್ಲ. ಅವರ ಅಭಿಪ್ರಾಯವೇನಿತ್ತು ಎನ್ನುವುದನ್ನು ದಯಮಾಡಿ ತಿಳಿಸಬೇಕು.

ಶ್ರೀ ಕೆ.ಜೆ. ಜಾರ್ಜ್:– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ಹಾಗೆ ನಾವು KFD ಮತ್ತು PFI ಸಂಘಟನೆಗಳ ಮೇಲೆ ಯಾವುದೇ ಕೇಸ್ ಹಾಕಿಲ್ಲ, ಯಾವುದೇ ಕೇಸ್ ಅನ್ನು ವಾಪಸ್ ತೆಗೆದುಕೊಂಡಿಲ್ಲ. ಎರಡನೆಯದಾಗಿ ಈ ಸಂಘಟನೆಗಳು ನಮ್ಮ ರಾಜ್ಯದಲ್ಲಿವೆ ಹಾಗೂ ದೇಶದಲ್ಲಿವೆ. ಈ ಸಂಘಟನೆಗಳು ಬ್ಯಾನ್ ಮಾಡಿದಂತಹ ಸಂಘಟನೆಗಳು ಅಲ್ಲ. ವಾಪಸ್ ತೆಗೆದುಕೊಂಡಿರುವ ಮೈಸೂರಿನ ಕೇಸ್‌ಗಳು ಮೈಸೂರಿನಲ್ಲಿ ಒಂದು ಮಸೀದಿ ಹತ್ತಿರ ಹಂದಿ ಪದಾರ್ಥಗಳನ್ನು ಹಾಕಿದಂತಹ ಸಂದರ್ಭದಲ್ಲಿ ಗಲಾಟೆಗಳು ಆಗಿದ್ದವು, ಹಲ್ಲೆ ಆಗಿತ್ತು. ಅಲ್ಲಿ ಒಂದೇ ಕೋಮಿನ ಕೇಸ್‌ಗಳನ್ನು ವಾಪಸ್ ತೆಗೆದುಕೊಂಡಿಲ್ಲ. ಒಂದು ಕೇಸ್‌ನಲ್ಲಿ ಸುಮಾರು 100 ಜನ ಹಿಂದುಗಳು ಇದ್ದಾರೆ, 240 ಜನ ಮುಸಲ್ಮಾನರಿದ್ದಾರೆ. ಒಟ್ಟಿನಲ್ಲಿ ಪ್ರತಿಯೊಬ್ಬರ ಕೇಸ್‌ಗಳನ್ನು ವಾಪಸ್ ತೆಗೆದುಕೊಂಡಿದ್ದೇವೆ. ಅದೇ ರೀತಿಯಲ್ಲಿ ಬಾಂಗ್ಲಾ ದೇಶದ ಲೇಖಕಿ ಒಬ್ಬರ ಲೇಖನ ಪ್ರಕಟವಾಗಿ, ಅದು ಮತೀಯ ಭಾವನೆ ಕೆರಳಿಸಿದಾಗ ಎಮೋಷನಲ್ ಆಗಿ ಗಲಾಟೆ ಆಯಿತು. ಅದು ಹಾಸನದಲ್ಲಿ ಆಗಿದೆ, ಅದೇ ರೀತಿಯಲ್ಲಿ ಶಿವಮೊಗ್ಗದಲ್ಲಿ ಆಗಿದೆ. ಹಾಸನ ಮತ್ತು ಶಿವಮೊಗ್ಗ ತಾವು ನೋಡಿದರೆ ಬಹುಶಃ ಶಿವಮೊಗ್ಗದಲ್ಲಿ 663 ಜನ ಹಿಂದುಗಳು, 1151 ಮುಸಲ್ಮಾನರ ಮೇಲೆ ಕೇಸ್ ಇತ್ತು. ಅದನ್ನೂ ವಾಪಸ್ ತೆಗೆದುಕೊಂಡಿದ್ದೇವೆ. ಅದೇ ರೀತಿಯಲ್ಲಿ ಹಾಸನದಲ್ಲಿ ಸಮೇತ 14 ಜನ ಹಿಂದುಗಳು 241 ಜನ ಮುಸಲ್ಮಾನರು. ನಾವು ಯಾವುದೇ

ಜಾತಿಯ ಮೇಲೆ ಕೇಸ್ ವಾಪಸ್ ತೆಗೆದುಕೊಂಡಿಲ್ಲ. ಸರ್ಕಾರಕ್ಕೆ ಕೇಸ್ ವಾಪಸ್ ತೆಗೆದುಕೊಳ್ಳುವುದಕ್ಕೆ ಅಧಿಕಾರವಿದೆ. ಕಾನೂನು ಇಲಾಖೆ prosecution ಮತ್ತು Home Department ನವರು ಅಭಿಪ್ರಾಯ ಕೊಟ್ಟ ಮೇಲೆ, ಕ್ಯಾಬಿನೆಟ್ ಸಬ್ ಕಮಿಟಿ ಮಾಡಿ, ಆ ಸಬ್ ಕಮಿಟಿಯಲ್ಲಿ ಸಾಕಷ್ಟು ಚರ್ಚೆ ಮಾಡಿ ಈ ಕೇಸ್‌ಗಳನ್ನು ಹಿಂದಕ್ಕೆ ತೆಗೆದುಕೊಂಡಿದ್ದೇವೆ. ಅದು ಕ್ಯಾಬಿನೆಟ್‌ನಲ್ಲಿ ಕೂಡ ಚರ್ಚೆ ಮಾಡಿ ನ್ಯಾಯಯುತವಾಗಿ ಹಿಂದಕ್ಕೆ ತೆಗೆದುಕೊಂಡಿದ್ದೇವೆ. ಹಿಂದೆ ಸಹಿತ ಸರ್ಕಾರಗಳು ಇದೇ ರೀತಿಯಲ್ಲಿ ಸಾಕಷ್ಟು ಕೇಸ್‌ಗಳನ್ನು ಹಿಂದಕ್ಕೆ ತೆಗೆದುಕೊಂಡಿದ್ದಾರೆ.

ಶ್ರೀ ವಿ. ಸುನಿಲ್‌ಕುಮಾರ್:– ಮಾನ್ಯ ಸಚಿವರೆ, ನನ್ನ ಪ್ರಶ್ನೆಗೆ ಉತ್ತರವನ್ನು ಕೊಡಲಿಲ್ಲ. 'ಸಮಗ್ರ ದೃಷ್ಟಿಕೋನ' ಎಂದರೇನು ಎಂಬುದು ನನ್ನ ಮೊದಲನೇ ಪ್ರಶ್ನೆ. ಎರಡನೆಯದಾಗಿ ಐ.ಜಿ.ಪಿ. ಮತ್ತು ಡಿ.ಜಿ. ಯವರು ಈ ಕೇಸ್‌ನ್ನು ವಾಪಸ್ ತೆಗೆದುಕೊಳ್ಳುವುದಕ್ಕೆ ನಿಮಗೆ ಕೊಟ್ಟಿರುವಂಥ ಅಭಿಪ್ರಾಯವೇನು? ಈ ಎರಡನ್ನು ಸ್ಪಷ್ಟಪಡಿಸಿ. ಹಿಂದುಗಳದ್ದನ್ನು ತೆಗೆದುಕೊಂಡಿದ್ದೀರೋ, ಮುಸಲ್ಮಾನ್‌ರವರುಗಳದ್ದನ್ನು ತೆಗೆದುಕೊಂಡಿದ್ದೀರೋ ಎಂಬ ಬಗ್ಗೆ ನನ್ನ ಪ್ರಶ್ನೆಯಿಲ್ಲ.

ಶ್ರೀ ಸಿ.ಟಿ. ರವಿ:– ಮಾನ್ಯ ಅಧ್ಯಕ್ಷರೆ, Prosecution ನಡಾವಳಿಯನ್ನು ಕೇಳಿತ್ತು. ಆ ನಡಾವಳಿಯನ್ನು ಓದಗಿಸಿದ್ದೀರ?

ಶ್ರೀ ಕೆ.ಜೆ. ಜಾರ್ಜ್:– ಮಾನ್ಯ ಅಧ್ಯಕ್ಷರೆ, ಹಿಂದೆ ಕೇಸ್‌ಗಳನ್ನು ತೆಗೆದುಕೊಂಡಾಗಲೂ ಕೂಡ, ಅಭಿಪ್ರಾಯವನ್ನು ಕೊಡುವುದನ್ನು ಅವರು ಕೊಡುತ್ತಾರೆ. ಅವರ ಅಭಿಪ್ರಾಯದಂತೆ ನಾವು ಹೋಗಬೇಕಾಗಿಲ್ಲ. Cabinet is supreme,

ಶ್ರೀ ವಿ. ಸುನಿಲ್‌ಕುಮಾರ್:– ನನಗೆ ಮಾಹಿತಿಯಿದೆ, ...

ಶ್ರೀ ಕೆ.ಜೆ. ಜಾರ್ಜ್:– ನೀವು ಕೇಳಿ ಒಂದ್ನಿಮಿಷ, ಸಿ.ಟಿ. ರವಿಯವರ ಮೇಲೆ ವಾಪಸ್ ತೆಗೆದಾಗ, ಸಿ.ಟಿ. ರವಿಯವರು.....

ಶ್ರೀ ಸಿ.ಟಿ. ರವಿ:– ರವಿ ಪಾಕಿಸ್ತಾನ್ ಜಿಂದಾಬಾದ್ ಎಂದು ಕೂಗಿಲ್ಲ. ನಾನು ಭಾರತ್ ಮಾತಾ ಕಿ ಜೈ ಎಂದೇ ಕೂಗಿರುವುದು. ನಿಮ್ಮ ದೃಷ್ಟಿಯಲ್ಲಿ ಪಾಕಿಸ್ತಾನ್ ಜಿಂದಾಬಾದ್ ಮತ್ತು ಭಾರತ್ ಮಾತಾ ಕಿ ಜೈ ಎಂದು ಹೇಳುವುದು ಎರಡೂ ಒಂದೇ?

ಶ್ರೀ ಕೆ.ಜೆ. ಜಾರ್ಜ್:– ನೀವು ಇಲ್ಲಿ ಕೇಳಿ. ನಿಮ್ಮ ಮೇಲೆ ವಾಪಸ್ ತೆಗೆದಾಗ...

ಶ್ರೀ ಸಿ.ಟಿ. ರವಿ:– ನಿಮ್ಮ ದೃಷ್ಟಿಯಲ್ಲಿ ಪಾಕಿಸ್ತಾನ್ ಜಿಂದಾಬಾದ್ ಎಂದು ಕೂಗಿದರೆ ಅವರು ದೇಶಭಕ್ತರೆ, ಇದರ ಬಗ್ಗೆ ಹೇಳಿಬಿಡಿ.

ಶ್ರೀ ಕೆ.ಜೆ. ಜಾರ್ಜ್:– ಪಾಕಿಸ್ತಾನ್ ಜಿಂದಾಬಾದ್ ಎಂದು ಹೇಳಿದರು ಎಂದು ನೀವು ಹೇಳುತ್ತಿದ್ದೀರಿಯೇ ಹೊರತು,...

ಶ್ರೀ ಸಿ.ಟಿ. ರವಿ:– ನಾನೇ? ನಾನು 'ಭಾರತ್ ಮಾತಾ ಕಿ ಜೈ' ಎಂದೇ ಹೇಳುವುದು ನನ್ನ ಕುತ್ತಿಗೆ ಕುಯ್ದರೂ ಕೂಡ ಭಾರತ್ ಮಾತಾ ಕಿ ಜೈ ಎಂದೇ ಹೇಳುತ್ತೇನೆ.

ಶ್ರೀ ವಿ. ಸುನಿಲ್‌ಕುಮಾರ್:– ನಾನು ಕೇಳುತ್ತಿರುವುದು ಇಷ್ಟೆ. ಐ.ಜಿ. ಮತ್ತು ಡಿ.ಜಿ. ಯವರು ಇದರ ಬಗ್ಗೆ ಕೊಟ್ಟಂಥ ಅಭಿಪ್ರಾಯ ಏನು? ನೀವು ಏನು ಕೊಟ್ಟಿದ್ದೀರೋ ನನಗೆ ಗೊತ್ತಿಲ್ಲ. ನೀವು ಅದರ ಬಗ್ಗೆ clarify ಮಾಡಿ. ನಡಾವಳಿ ಕೊಡಿ ಎಂದು ಕೇಳುತ್ತಿದ್ದೇವೆ. ನೀವು ಅವರ ಮೇಲೆ ಕೇಸ್ ಹಿಂದಕ್ಕೆ ತೆಗೆದಿದ್ದೀರಿ, ಇವರ ಮೇಲೆ ಕೇಸ್ ವಾಪಸ್ ತೆಗೆದುಕೊಂಡಿದ್ದೀರಿ ಎಂಬುದಕ್ಕೆ justification ಬೇಡ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:– ಅಭಿಪ್ರಾಯವನ್ನು ಕ್ಯಾಬಿನೆಟ್‌ಗೆ ಕೊಡುತ್ತಾರೆ. ಆ ಅಭಿಪ್ರಾಯವನ್ನು ನಾನು ಇಲ್ಲಿ ಹೇಳಬೇಕಾಗಿಲ್ಲ. ಕ್ಯಾಬಿನೆಟ್‌ನಲ್ಲಿ ಇದರ ಬಗ್ಗೆ ಡಿಸಿಷನ್ ತೆಗೆದುಕೊಂಡಿದ್ದೇವೆ. ನಾವು ಕೇಸ್‌ಗಳನ್ನು ವಾಪಸ್ ತೆಗೆದುಕೊಂಡಿದ್ದೇವೆ. ನಿಮ್ಮ ಕಾಲದಲ್ಲಿ ಮರ್ಡರ್ ಕೇಸ್‌ನ್ನು ವಾಪಸ್

ತೆಗೆದುಕೊಂಡಿದ್ದೀರಿ. ನಿಮ್ಮ ಕಾಲದಲ್ಲಿ ಗಡಿ ಭಾಗದಲ್ಲಿ ದಾಖಲಾದ ಕೇಸ್ ವಾಪಸ್ ತೆಗೆದುಕೊಂಡಿದ್ದೀರಿ. ನಾವು ರೈತರ ಮೇಲಿದ್ದ ಕೇಸ್ ವಾಪಸ್ ತೆಗೆದುಕೊಂಡಿದ್ದೇವೆ. ಕನ್ನಡ ಪರ ಹೋರಾಟ ಮಾಡಿದವರ ಮೇಲಿದ್ದ ಕೇಸ್‌ಗಳನ್ನು ವಾಪಸ್ ತೆಗೆದುಕೊಂಡಿದ್ದೇವೆ. ಹೀಗೆ ನಾವು ಸಾಕಷ್ಟು ಚರ್ಚೆ ಮಾಡಿಯೇ ನಮ್ಮ ಅಧಿಕಾರವನ್ನು ಉಪಯೋಗಿಸಿಕೊಂಡು ಈ ವಿಚಾರದಲ್ಲಿ ತೀರ್ಮಾನ ತೆಗೆದುಕೊಂಡಿದ್ದೇವೆ.

ಶ್ರೀ ವಿ. ಸುನಿಲ್‌ಕುಮಾರ್:– ಮಾನ್ಯ ಅಧ್ಯಕ್ಷರೆ, ನಾನು ಕೇಳುತ್ತಿರುವುದಕ್ಕೆ ದಯಮಾಡಿ ಉತ್ತರವನ್ನು ಅವರು ಕೊಡಲಿ.

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಅಧ್ಯಕ್ಷರೆ, ಸದರಿ ಮೊಕದ್ದಮೆಗಳನ್ನು ವಾಪಸ್ಸು ಪಡೆಯುವಲ್ಲಿ ಸ್ಥಳೀಯ ಠಾಣೆ ಹಾಗೂ ಡಿ.ಜಿ. ಮತ್ತು ಐ.ಜಿ.ಪಿ. ಯವರು ಒಪ್ಪಿಗೆ ಸೂಚಿಸಿರುತ್ತಾರೆಯೇ ಎಂದು ಇದರ details ಕೇಳುತ್ತಿದ್ದೇವೆ. ಈ ಪ್ರಶ್ನೆಗೆ ಉತ್ತರವನ್ನೇ ಕೊಟ್ಟಿಲ್ಲ. ಕೊಟ್ಟಿರುವ ಉತ್ತರ ಅಪೂರ್ಣವಾಗಿದೆ. ಮುಚ್ಚಿಹಾಕುವಂಥ ಕೆಲಸವಿದಾಗಿದೆ.

(ಗೊಂದಲ)

ಅಧ್ಯಕ್ಷರು:– ನೋಡಿ, ಎಲ್ಲರೂ ಒಂದ್ನಿಮಿಷ ಸುಮ್ಮನಿರಿ. ಮಾನ್ಯ ಸಚಿವರೆ, ಅವರು ಅಭಿಪ್ರಾಯ ಕೊಟ್ಟಿರುವುದನ್ನು ಈ ಸದನಕ್ಕೆ ಹೇಳುವುದಕ್ಕೆ ಬರುತ್ತದೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ಹೇಳಿ.

ಶ್ರೀ ಕೆ.ಜೆ. ಜಾರ್ಜ್:– ಮಾನ್ಯ ಅಧ್ಯಕ್ಷರೆ, ಅವರು ತಮ್ಮ ಅಭಿಪ್ರಾಯವನ್ನು ಕ್ಯಾಬಿನೆಟ್‌ಗೆ ಕೊಟ್ಟಿದ್ದಾರೆ. ಅವರ ಅಭಿಪ್ರಾಯದಂತೆ cabinet decision ತೆಗೆದುಕೊಳ್ಳುವ ಅವಶ್ಯಕತೆಯಿಲ್ಲ. Cabinet is supreme, we have taken decision, we have withdrawn the case.

ಅಧ್ಯಕ್ಷರು:– ಆಯಿತು, Ok.

ಶ್ರೀ ವಿ. ಸುನಿಲ್‌ಕುಮಾರ್:– ನೀವು ತೆಗೆದುಕೊಂಡಿರುವ decision ಬಗ್ಗೆ ನಾನು question ಮಾಡುತ್ತಿಲ್ಲ.

ಅಧ್ಯಕ್ಷರು:– ಆಯಿತು ಬಿಡಿ, ಚರ್ಚೆ ಸಾಕು.

ಶ್ರೀ ಸಿ.ಟಿ. ರವಿ:– ನನಗೆ ಬಂದಿರುವ ಮಾಹಿತಿ ಪ್ರಕಾರ prosecution ಮತ್ತು ಡಿ.ಐ.ಜಿ., ಅವರ ರಿಪೋರ್ಟ್‌ನಲ್ಲಿ ಇವು ಅಪಾಯಕಾರಿ ಸಂಘಟನೆಗಳು, ದೇಶ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿವೆ, ಅಂಥವರ ಮೇಲೆ ಇರುವ ಮೊಕದ್ದಮೆ ವಾಪಸ್ ತೆಗೆದುಕೊಂಡರೆ ಬಹಳ ಹಾನಿಯಾಗುತ್ತದೆಯಾದ ಕಾರಣ ಯಾವುದೇ ಕಾರಣಕ್ಕೂ ಪ್ರಕರಣ ವಾಪಸ್ ತೆಗೆದುಕೊಳ್ಳಬಾರದು ಎಂದು ಅವರು ಅಭಿಪ್ರಾಯವನ್ನು ಕೊಟ್ಟ ಮೇಲೂ ಕೂಡ, ಇವರು ವಾಪಸ್ ತೆಗೆದುಕೊಂಡಿರತಕ್ಕಂಥ ಹಿನ್ನಲೆ ಅರ್ಥವಾಗದೇ ಇರತಕ್ಕಂಥದ್ದು ಮತ್ತು ಅದಕ್ಕೋಸ್ಕರವೇ ನಡಾವಳಿ ಪ್ರತಿ ಒದಗಿಸುವುದಕ್ಕೆ ಇವರು ಹಿಂದೇಟು ಹೊಡೆಯುತ್ತಿದ್ದಾರೆ. ಇಲ್ಲದಿದ್ದರೆ ಇವರು ನಡಾವಳಿ ಪ್ರತಿಯನ್ನು ಒದಗಿಸುತ್ತಿದ್ದರು.

ಶ್ರೀ ವಿ. ಸುನಿಲ್‌ಕುಮಾರ್:– ಮಾನ್ಯ ಸಚಿವರೆ, ನೀವು ತೆಗೆದುಕೊಂಡಿರುವ decision ಬಗ್ಗೆ question ಮಾಡುತ್ತಿಲ್ಲ. ನೀವು ನಡಾವಳಿ ಪ್ರತಿಯನ್ನು ನಮಗೆ ಕೊಡಿ. ಅವರು ಏನು ಅಭಿಪ್ರಾಯವನ್ನು ಕೊಟ್ಟಿದ್ದಾರೆ? ಎಂಬುದನ್ನು ತಿಳಿಸಿ ಎಂದು ಕೇಳುತ್ತಿದ್ದೇನೆ. ನೀವು ತೆಗೆದುಕೊಂಡಿರುವ ನಿರ್ಣಯದ ಬಗ್ಗೆ ನಾನು question ಮಾಡುತ್ತಿಲ್ಲ.

ಶ್ರೀ ಸಿ.ಟಿ. ರವಿ:– ದೇಶದ್ರೋಹಿಗಳಿಗೆ ನಿಮ್ಮ ಮೇಲೆ ಪ್ರೀತಿಯಿದ್ದರೆ ವಾಪಸ್ ತೆಗೆದುಕೊಳ್ಳಿ. ಆದರೆ ನಡಾವಳಿ ಪ್ರತಿಯನ್ನು ಒದಗಿಸಿ.

ಅಧ್ಯಕ್ಷರು:– ಸ್ವಲ್ಪ ತಾಳ್ರಿ, ನೋಡಿ, ಅವರು ಕೊಡುವುದು ಬಿಡುವುದು ಅವರಿಷ್ಟ. Cabinet decision ಇದೆ. Cabinet decision ಪ್ರಕಾರ ಇದಕ್ಕೆ ಉತ್ತರವನ್ನು ಹೇಳಿದ್ದಾರೆ.

(ಗೊಂದಲ)

ಶ್ರೀ ವಿ. ಸುನಿಲ್‌ಕುಮಾರ್:– ಪೊಲೀಸ್ ಇಲಾಖೆಯ ವಿರೋಧದ ನಡುವೆಯೂ ನಾವು cabinet decision ತೆಗೆದುಕೊಂಡಿದ್ದೇವೆಂದು ಇವರು ಹೇಳಲಿ. ದೇಶದ್ರೋಹಿ ಕೆಲಸ ಮಾಡುತ್ತಿರುವವರಿಗೆ ಸಪೋರ್ಟ್ ಮಾಡಿದ್ದೇವೆಂದು ಅವರು ಹೇಳಲಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ದೇಶದ್ರೋಹಿ ಕೆಲಸ ಮಾಡುವಂಥವರ ಮೇಲಿದ್ದ ಕೇಸ್ ವಾಪಸ್ ತೆಗೆದುಕೊಳ್ಳುತ್ತಾರೆ. ಅದೇ ರೈತ ಸಂಘದವರು ಹೋರಾಟ ಮಾಡಿದಾಗ ಅವರ ಮೇಲೆ ಹಾಕಿರುವ ಕೇಸ್ ವಾಪಸ್ ತೆಗೆದುಕೊಳ್ಳುವುದಿಲ್ಲ.

(ಗೊಂದಲ)

ಅಧ್ಯಕ್ಷರು:– ನಿಮ್ಮ ಪ್ರಶ್ನೆ ಮುಗಿಯಿತು. ಮಾನ್ಯ ಗೋಪಾಲಯ್ಯ ಇಲ್ಲ, ಡಾ॥ ಕೆ. ಸುಧಾಕರ್ ಇಲ್ಲ, ಇಲ್ಲಿ ಪ್ರಶ್ನೋತ್ತರ ಮುಗಿಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಮಂಡಿಸುವುದು. ಮಾನ್ಯ ಸಚಿವರೆ, ಉತ್ತರಗಳನ್ನು ಮಂಡಿಸಿ.

(ಗೊಂದಲ)

ಆ. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಅಧ್ಯಕ್ಷರೆ, ದಿನಾಂಕ 07.07.2015 ರ ಏಳನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 230 ಪ್ರಶ್ನೆಗಳ ಪೈಕಿ 185 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು:– ಮಂಡಿಸಲಾಯಿತು. ಈಗ ಶೂನ್ಯ ವೇಳೆ. ವೈ.ಎಸ್.ವಿ. ದತ್ತಾ